ಎಸ್.ಸಿ.ಪಿ.ಯೇ ಇರಬಹುದು, ಅಂಬೇಡ್ಕರ್ ಹೌಸಸ್‌ದೇ ಇರಬಹುದು, ಸಣ್ಣ ಅಥವಾ ದೊಡ್ಡ ನೀರಾವರಿಯದೇ ಇರಬಹುದು, ರಸ್ತೆ ಮತ್ತು ಸೇತುವೆಯದೇ ಇರಬಹುದು, ಇಷ್ಟೇ ಅಲ್ಲದೇ ಬೇರೆ ಸಂಘ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಬೇಕಾದುದು ಇರಬಹುದು ಅಥವಾ ಸಣ್ಣ ಕೈಗಾರಿಕೆಗಳಿಗೆ ಕೊಡತಕ್ಕಂಥ ಸಬ್ಸಿಡಿಯೂ ಇರಬಹುದು. ಈ ರೀತಿಯದು ಅನೇಕವಿವೆ. ಅದಕ್ಕಾಗಿಯೇ ನಾನು ಪಟ್ಟಿಯನ್ನು ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಪುನಃ ಇದು ಬಜೆಟ್ ಸೆಷನ್‌ನಲ್ಲಿ ಬರುತ್ತದೆ ಆಗ ನಾನು ಹೇಳುತ್ತೇನೆ. ಅದಕ್ಕಾಗಿಯೇ ನಾವು ಇವೊತ್ತು ಶ್ವೇತಪತ್ರವನ್ನು ಸದನದಲ್ಲಿ ಇಡಬೇಕೆಂದು ಸರ್ಕಾರವನ್ನು ಡಿಮ್ಯಾಂಡ್ ಮಾಡಿದ್ದೇವೆ. ತಾವು ಗ್ರ್ಯಾಂಟ್ಸ್ ಎಷ್ಟಿದೆ, ಎಷ್ಟು ಪ್ರಾವಿಷನ್ ಇತ್ತು ಎಷ್ಟು ಪ್ಲಾನ್‌ನಲ್ಲಿ ಕಟ್ ಆಗಿದೆ, ಕಟ್ ಆದ ಪ್ರಕಾರವೇ ತಾವು ಎಷ್ಟು ಹಣವನ್ನು ಬಿಡುಗಡೆ ಮಾಡಿ ಖರ್ಚಾಗದೇ ಉಳಿದಿದೆ ಎಂಬುದನ್ನು ಮಾರ್ಚ್ 31ಕ್ಕೆ ಅಂತ್ಯವಾಗುವ ಹಾಗೆ ಹೇಳಬೇಕು. ಏಕೆಂದರೆ ಪುನಃ ನೀವು ಹೊಸ ರಿಸೋರ್ಸಸ್ ಮೊಬಿಲೈಸ್ ಮಾಡಿ ಹಳೆಯದನ್ನು ಕೊಡತಕ್ಕಂಥದ್ದು ಒಂದು ತರಹ. ನಾನು ಅದಕ್ಕೆ ಹೋಗುವುದಿಲ್ಲ. ಆದರೆ 31ರ ಮಾರ್ಚ್ ಪ್ರಕಾರ ಬಜೆಟ್‌ನಲ್ಲಿ ತಾವು ಮಾಡಿದ ಪ್ರಾವಿಷನ್ ಪ್ರಕಾರ ತಾವು ಒಂದು ಶ್ವೇತಪತ್ರವನ್ನು ಪಬ್ಲಿಷ್ ಮಾಡಿ. ಅದನ್ನು ಬಿಟ್ಟು ನೀವು ಶ್ವೇತಪತ್ರವನ್ನು ಪಬ್ಲಿಷ್ ಮಾಡುವುದಕ್ಕೆ ಆಗುವುದಿಲ್ಲ, ನಾವು ಹೇಳಿದ್ದೇ ಸರಿ ಎಂದರೆ ನಾವು ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಇದರಿಂದ ಏನು ಗೊತ್ತಾಗುತ್ತದೆಂದರೆ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಮತ್ತು ಅದಕ್ಕೆ ನೀವು ಸ್ಪಂದಿಸುತ್ತಿಲ್ಲವೆಂದು ಹೇಳಿ ಪ್ರತಿಭಟನೆಯನ್ನು ವ್ಯಕ್ತಪಡಿಸಿ ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೇ, ಎಮ್. ಐ.ಡಿ.ಬಿ.ನಲ್ಲಿ ಸ್ಪೆಷಲ್ ಕಾಂಪೋನೆಂಟ್‌ಗೆ 8 ಕೋಟಿ ರೂ.ಗಳನ್ನು ಕೊಟ್ಟಿಲ್ಲ. ಇನ್ನು 15 ಕೋಟಿ ಬಿಡುಗಡೆ ಮಾಡಬೇಕು. ಇಡೀ ರಾಜ್ಯದಲ್ಲಿ ಆಸ್ಪಾಲ್ಟ್ ಕೆಲಸಗಳು ನಿಂತಿವೆ. ಇಂಥ ಸಂದರ್ಭದಲ್ಲಿ ನಾವು ಅವುಗಳನ್ನು ಸರಿಪಡಿಸುತ್ತೇವೆ ಎನ್ನುವಂಥ ಭರವಸೆಯನ್ನು ನಮಗೆ ಅವರು ಕೊಡದಿದ್ದರೆ ನಾವೂ ಕೂಡ ಅನಿವಾರ್ಯವಾಗಿ ಸಭಾತ್ಯಾಗವನ್ನು ಮಾಡುತ್ತೇವೆ.

(ಬಿ.ಜೆ.ಪಿ.ಯ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಲೋಕೋಪಯೋಗಿ ರಸ್ತೆಗಳಂತೂ ಕುಲಗೆಟ್ಟು ಹೋಗಿವೆ. ಇಡೀ ರಾಜ್ಯದಲ್ಲಿ ಎಲ್ಲಾ ರಸ್ತೆಗಳು ಕೆಟ್ಟಿವೆ. ಈ ರೀತಿಯಾದರೆ ಅದು ನಿಮಗೂ ಕೆಟ್ಟ ಹೆಸರಾಗುತ್ತದೆ. ಈ ಬಗ್ಗೆ ನಿಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಈಗಾಗಲೇ ಜನರಲ್ ಬಜೆಟ್ ಮೇಲೆ ಇವೆಲ್ಲವನ್ನೂ ಹೇಳಿದರು. ಬಜೆಟ್ ಮಂಡಿಸಿರುವುದು ಡಾಕ್ಯುಮೆಂಟ್ ಅಲ್ಲವೇ? ಸದನದಲ್ಲಿ ಎಲ್ಲಾ ಅಂಕಿಅಂಶಗಳನ್ನೊಳಗೊಂಡ ಬಜೆಟ್ ಇಟ್ಟಿದ್ದರೂ ಕೂಡ ಅದರ ಮೇಲೆ ಮತ್ತೆ ಶ್ವೇತಪತ್ರ ಇವರಿಗೆ